




ಕೊಲೆ ಆರೋಪಿಗಳ ಬಂಧನ

ನರಮಂಡಲದ ಮೇಲೆ ಪರಿಣಾಮ ಬೀರುತ್ತವೆ) 'ವಿ' ವರ್ಣಮಯ ಅರ್ಥ **Vivtory, Viscous, Venmous** ಎಂಬುದಾಗಿದೆ. ಇಂತಹ ಘೋರ ವಿಷದ್ರವ್ಯ, ಉತ್ತರ ಕೊರಿಯಾದ ಬಳಿ ಇನ್ನೂ 5000 ಟನ್‌ಗಳಿಗಿಂತಲೂ ಮಿಗಿಲಾಗಿ ಇದೆ ಎಂಬುದು ಅಮೆರಿಕ ಸೇರಿದಂತೆ ಹಲವು ರಾಷ್ಟ್ರಗಳ ಅಂಬೋಣ.

ಈ ದ್ರವ ಪದಾರ್ಥವನ್ನು ನೋಮ್ ಅವರ ಮೇಲೆ ಬಳಸುವಾಗ, ಆ ಇಬ್ಬರು ಯುವತಿಯರು ಕೈಗಳಿಗೆ ಗ್ಲೌಸ್ ಅನ್ನು ಬಳಸಿದ್ದರೂ ಕೂಡಾ, ಅದರ ವಿಷಗಾಳಿ ಅವರನ್ನು ಕೊಲ್ಲುತ್ತಿತ್ತು. ಹಾಗಿದ್ದೂ ಆ ಯುವತಿಯರು ಅಪಾಯವಿಲ್ಲದೆ ಪಾರಾಗಿದ್ದು ಹೇಗೆ? ಮಲೇಷ್ಯಾದ ತನಿಖಾದಳದವರ ಪ್ರಕಾರ ಈ ಯುವತಿಯರಿಬ್ಬರೂ ಬಹುಷಃ, ವಿ.ಎಕ್ಸ್‌ನ ಪ್ರತಿವಿಷ (**Antidote**) ಸೇವಿಸಿರಬೇಕು. ಅಥವಾ ವಿಷಕಾರಿಯಲ್ಲದ ಎರಡು ಬೇರೆ ಬೇರೆ ರಾಸಾಯನಿಕಗಳನ್ನು ಒಮ್ಮೆಲೆ ಬೆರೆಸಿ ನೋಮ್ ಮುಖದ ಮೇಲೆ ಸವರಿರಬಹುದು. ಬಳಿಕ ಆ ಮಿಶ್ರಣವು ವಿ.ಎಕ್ಸ್ ವಿಷವಾಗಿ ಪರಿವರ್ತನೆಯಾಗಿರಬಹುದು.

ಜಗತ್ತಿನಲ್ಲಿ ಈ ಹಿಂದೆ ನಡೆದ ಕೆಲವೊಂದು ಸಮೂಹನಾಶಕ ಹತ್ಯೆಗಳಲ್ಲಿ ವಿ.ಎಕ್ಸ್ ಅನ್ನು ಬಳಸಲಾಗಿದೆ. 1988ರಲ್ಲಿ ಇರಾಕ್‌ನ ಕುರ್ದಿಶ್ ಜನರ ಸಾಮೂಹಿಕ ಹತ್ಯೆಗೆ ಇದನ್ನೇ ಬಳಸಲಾಗಿದೆ ಎಂದು ವಿಶ್ವ ಸಮೂಹ ನಂಬಿದೆ. ಹಲವಾರು ಹಾಲಿವುಡ್‌ನ ಸಿನೆಮಾಗಳಲ್ಲಿ ವಿ.ಎಕ್ಸ್ ವಿಷವನ್ನು ಇಟ್ಟುಕೊಂಡೇ ಕಥೆ ಹೆಣೆಯಲಾಗಿದೆ. 1996ರಲ್ಲಿ ಬಿಡುಗಡೆಯಾದ 'ದ ರಾಕ್' ಎನ್ನುವ ಸಿನೆಮಾ ಈ ವಿಷದ ಕಥಾವಸ್ತುವನ್ನೇ ಹೊಂದಿದೆ.

ಪ್ರಥಮ ಚಿಕಿತ್ಸೆ: ಈ ರಾಸಾಯನಿಕದ ಸಂಪರ್ಕಕ್ಕೆ ಬಂದ ವ್ಯಕ್ತಿಯ ದೇಹದ ಭಾಗದಿಂದ ಈ ರಾಸಾಯನಿಕವನ್ನು ತೆಗೆದು ಹಾಕುವುದಕ್ಕೆ ಪ್ರಥಮ ಆದ್ಯತೆ ನೀಡಬೇಕು. ಬಳಿಕ ವ್ಯಕ್ತಿಯನ್ನು ಶುದ್ಧ ವಾತಾವರಣದತ್ತ ತಕ್ಷಣ ಸಾಗಿಸಿ, ಸಂಪರ್ಕಕ್ಕೆ ಬಂದ ದೇಹದ ಭಾಗವನ್ನು ಯಾವುದೇ ಬ್ಲಿಚಿಂಗ್ ದ್ರಾವಣ/ಪೌಡರ್‌ನಿಂದ ಶುದ್ಧೀಕರಿಸಿಬೇಕು. ಅದರ ಬಳಿಕ ಆ ಭಾಗವನ್ನು ನೀರಿನಿಂದ ಶುದ್ಧಗೊಳಿಸಿ, ದೇಹದ ಬಟ್ಟೆಗಳನ್ನೂ ತೆಗೆಯಬೇಕು. (ಬಟ್ಟೆಯು ಈ ವಿಷವನ್ನು ಸುಲಭವಾಗಿ ಹಿಡಿದಿಟ್ಟು ಕೊಳ್ಳುತ್ತದೆ.) ಬಳಿಕ ತಕ್ಷಣ ನರಮಂಡಲದ ಪ್ರತಿವಿಷ ಔಷಧಿಯಾದ ಎಟ್ರೊಪಿನ್, ಡ್ರಾಲಿಡೊಕ್ಸಿನ್ ಇಂಜೆಕ್ಷನ್ ನೀಡಬೇಕು. ಜೊತೆಗೆ ಡೈಜಾಪಿಮ್ ಇಂಜೆಕ್ಷನ್ ಕೂಡ ನೀಡಬೇಕು. ಅಮೆರಿಕದ ಪ್ರತಿಯೋರ್ವ ಸೈನಿಕನೂ ಯುದ್ಧದ ಸಂದರ್ಭಗಳಲ್ಲಿ ಈ ಪ್ರತಿವಿಷ ಇಂಜೆಕ್ಷನ್‌ಗಳನ್ನು ತಮ್ಮ ಆಪತ್ಕಾಲೀನ ಚೀಲದಲ್ಲಿ ಇಟ್ಟುಕೊಂಡಿರುತ್ತಾನೆ. ಕೀಟನಾಶಕವಾಗಿ ಅಭಿವೃದ್ಧಿಗೊಂಡ ಈ ವಿ.ಎಕ್ಸ್ ಮಾನವಕುಲದ ವಿನಾಶವಾಗಿ ಬಳಕೆಯಾಗುತ್ತಿರುವುದು ನಿಜಕ್ಕೂ ವಿಪರ್ಯಾಸವೇ ಸರಿ.